**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಮನಾಬಾದ.**

| | | |
|---|---|---|
| ಸಾಕ್ಷಿದಾರನ ಹೆಸರು | :: | ನರೇಂದ್ರ |
| ತಂದೆಯ ಹೆಸರು | :: | ಅಮೃತರಾವ |
| ವಯಸ್ಸು | :: | 50 -ವರ್ಷ |
| ಉದ್ಯೋಗ | :: | ಅಬಕಾರಿ ಉಪ ನೀರಿಕ್ಷಕ ಹುಮನಾಬಾದ ವಲಯ |
| ವಾಸಸ್ಥಳ | :: | ಹುಮನಾಬಾದ |

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 01-07-2026.**

**ಮುಖ್ಯ ವಿಚಾರಣೆ : ಪ್ರಭಾರ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ನವೆಂಬರ 2014 ರಿಂದ ಈ ದಿನದವರೆಗೆ ಹುಮನಾಬಾದ ವಲಯ ಅಬಕಾರಿ ಉಪ ನೀರಿಕ್ಷಕನಾಗಿ ಕೆಲಸ ಮಾಡುತ್ತಿದ್ಧೇನೆ.

ದಿ.29-03-2025 ರಂದು ಸಾಯಂಕಾಲ 5.20 ಗಂಟೆಗೆ ನಾನು ಮತ್ತು ಚಾಸಾ4 ಮತ್ತು 5 ರವರು ಕರಕನಳ್ಳಿ ಗ್ರಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸದರಿ ಗ್ರಾಮದ ಪೋಚಮ್ಮ ದೇವಿ ಗುಡಿಯ ಎದುರಗಡೆ ಒಂದು ದ್ವಿಚಕ್ರ ವಾಹನ ಬರುತ್ತಿದ್ದು, ಅದರ ಮೇಲೆ ಅನುಮಾನ ಬಂದಿದ್ದರಿಂದ ಸದರಿ ವಾಹನದಲ್ಲಿ ಬಂದ ಒಬ್ಬ ಪುರುಷ ಮತ್ತು ಮಹಿಳೆಯನ್ನು ತಡೆದು ವಿಚಾರಿಸಿದಾಗ ಪುರುಷನ ಹೆಸರು 1 ನೇ ಆರೋಪಿ ಮಹಿಳೆ 2 ನೇ ಆರೋಪಿ ಎಂದು ತಿಳಿಸಿದ್ದರು. ಸದರಿ ಆರೋಪಿತರು ತಮ್ಮ ದ್ವಿಚಕ್ರ ವಾಹನದ ಮಧ್ಯದಲ್ಲಿ ಹಸಿರು ಬಣ್ಣದ ಪ್ಲಾಸ್ಟಿಕ ಚೀಲದಲ್ಲಿ ಏನಿದೆ ಎಂದು ವಿಚಾರಿಸಿದಾಗ ಸೆಂದಿ ಇದೆ ಎಂದು ತಿಳಿಸಿದ್ದರು.

ಆರೋಪಿತರು ಕಾನೂನು ಬಾಹಿರವಾಗಿ ಮದ್ಯ ಸಾಗಾಟ ಮಾಡುತ್ತಿರುವುದರಿಂದ ಅಲ್ಲೇ ಸ್ಥಳದಲ್ಲಿದ್ದ ಜನರನ್ನು ಪಂಚರಾಗಲು ಕೇಳಿಕೊಂಡಿದ್ದು, ಆದರೇ ಯಾರು ಪಂಚರಾಗಲು ಒಪ್ಪಲಿಲ್ಲ.

ಆದ್ದರಿಂದ ನಮ್ಮ ಸಿಬ್ಬಂದಿಯಾದ ಚಾಸಾ 4 ರವರನ್ನು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದೆನು. ಆಗ ಅಲ್ಲೆ ಸೇರಿದ ಜನರ ಪೈಕಿ ಇಬ್ಬರು ವ್ಯಕ್ತಿಗಳು ನನಗೆ ಮತ್ತು ನಮ್ಮ ಸಿಬ್ಬಂದಿಯವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿ ಆರೋಪಿತರಿಗೆ ನಮ್ಮೊಂದಿಗೆ ಜಗಳ ಮಾಡಲು ಪ್ರಚೋದನೆ ಮಾಡಿದ್ದರು. ನಂತರ ಪ್ರಚೋದನೆ ಮಾಡಿದ ವ್ಯಕ್ತಿಗಳ ಹೆಸರು ಎಂದರೆ ದಶರಥ ಮತ್ತು ಚಂದ್ರಪ್ಪ ಎಂದು ತಿಳಿಯಿತು. ಅದೇ ಸ್ಥಳದಲ್ಲದ್ದ 3 ನೇ ಆರೋಪಿ ಸಿದ್ದಪ್ಪ ನಾನು ಮೋಬೈಲನಿಂದ ವಿಡಿಯೋ ಮಾಡುವುದನ್ನು ತಡೆಯಲು ಬಂದು ನನ್ನ ಎದೆಗೆ ಕೈಯಿಂದ ದೂಡಿದನು ಆಗ ಆತನೊಂದಿಗೆ ಚಂದ್ರಪ್ಪನು ಸಹ ಇದ್ದನು. ಆತನು ಸಹ ನಾನು ವಿಡಿಯೋ ಮಾಡುವುದನ್ನು ತಡೆಯಲು ಬಂದು ನನ್ನ ಎದೆಗೆ ಕೈಯಿಂದ ದೂಡಿದನು. ನಂತರ 2 ಮತ್ತು 3 ನೇ ಆರೋಪಿತರು ಚೀಲದಲ್ಲಿದ್ದ ಸೆಂದಿ ಸರಾಯಿಯನ್ನು ರಸ್ತೆಯ ಮೇಲೆ ಎಸೆದು ಅದರಲ್ಲಿದ್ದ ಸೆಂದಿ ಸರಾಯಿ ಪಾಕೇಟಗಳನ್ನು ಎಸೆದು ಒಡೆದು ಹಾಕಿದ್ದರು. ನಾನು ವಿಡಿಯೋ ಮಾಡಲು ಪ್ರಾರಂಭಿಸಿದಂತೆ 1 ಮತ್ತು 2 ನೇ ಆರೋಪಿ ಮತ್ತು ಚಂದ್ರಪ್ಪ ಮತ್ತು ದಶರಥ ಇವರು ಸ್ಥಳದಿಂದ ಓಡಿ ಹೋದರು. 3 ನೇ ಆರೋಪಿ ಸ್ಥಳದಲ್ಲಿದ್ದ.

ಚಾಸಾ4 ರವರು ಪಂಚರನ್ನು ಕರೆದುಕೊಂಡು ಸ್ಥಳಕ್ಕೆ ಬಂದ ನಂತರ ಆರೋಪಿತರ ಮೇಲೆ ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿತರನ್ನು ನಮ್ಮ ಕಛೇರಿಗೆ ಕರೆದುಕೊಂಡು ಹೋಗಿ ವಿಚಾರಿಸಿ ನಂತರ ಬೇಮಳಖೇಡಾ ಠಾಣೆಗೆ ಹೋಗಿ ನಾನು ದೂರು ನೀಡಿರುತ್ತೇನೆ. 1 ರಿಂದ 3 ನೇ ಆರೋಪಿತರು, ದಶರಥ, ಚಂದ್ರಪ್ಪ ಇವರೆಲ್ಲರೂ ಸೇರಿ ನಾನು ಕರ್ತವ್ಯದಲ್ಲಿದ್ದಾಗ ನನ್ನ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆಂದು ದೂರು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿ.ಪಿ1, ಸಾಕ್ಷಿ ಸಹಿಯನ್ನು ನಿ.ಪಿ1(ಎ) ಎಂದು ಗುರುತಿಸಲಾಯಿತು.

ಮಾರನೆ ದಿನ ಅಂದರೆ ದಿ.30-03-2025 ರಂದು ಪೊಲೀಸರಿಗೆ ಘಟನಾ ಸ್ಥಳ ತೋರಿಸಿರುತ್ತೇನೆ. ಅವರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ, ನಕ್ಷೆ ಮತ್ತು ಫೋಟೊ ತೆಗೆದಿರುತ್ತಾರೆ. ಪಂಚನಾಮೆ ಪ್ರತಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ2, ಸಾಕ್ಷಿ ಸಹಿಯನ್ನು ನಿ.ಪಿ2(ಎ) ಎಂದು ಗುರುತಿಸಲಾಯಿತು. ಫೋಟೊ ನೋಡುತ್ತಿದ್ದು, ಅದರಲ್ಲಿ ನಾನು ಇರುತ್ತೇನೆ. ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು.

ನಾನು ಘಟನಾ ಸ್ಥಳದಲ್ಲಿ ಘಟನೆ ನಡೆಯುವಾಗ ನನ್ನ ಮೊಬೈಲನಿಂದ ವಿಡಿಯೋ ಚಿತ್ರಿಕರಣ ಮಾಡಿರುತ್ತೇನೆ. ಅದರ ಸಿ.ಡಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಆ ಬಗ್ಗೆ ಪೊಲೀಸರು ಸಿ.ಡಿ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆ ಮತ್ತು ಫೋಟೊ ನೋಡುತ್ತಿದ್ದು ಅವುಗಳನ್ನು ನಿ.ಪಿ-4 ಮತ್ತು 5 ಎಂದು, ಸಾಕ್ಷಿ ಸಹಿ ನಿ.ಪಿ-4(ಎ) ಎಂದು ಗುರುತಿಸಲಾಯಿತು. ಸಿ.ಡಿ ಯನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಆರೋಪಿತರನ್ನು

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೊಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ವಿನಾಯತಿ ಗೈರು ಹಾಜರಿರುತ್ತಾರೆ. ನನಗೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಇನ್ನು ಇಬ್ಬರು ಜನರಾದ ದಶರಥ ಮತ್ತು ಚಂದ್ರಪ್ಪ ನ್ಯಾಯಾಲಯದ ಮುಂದಿರುವುದಿಲ್ಲ.

**ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅವಶ್ಯಕ ಮಧ್ಯಂತರ ಅರ್ಜಿ ಸಲ್ಲಿಸಲು ಸಮಯಾವಕಾಶ ಕೇಳಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಹುಮನಾಬಾದ.